**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 90/2020**

**ಚಾ.ಸಾಃ 06, ಪ್ರಾ.ಸಾಃ 04**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ನಾಯ್ಕ |
| ತಂದೆಯ ಹೆಸರು | ಗಣಪತಿ ನಾಯ್ಕ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 02-02-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಹಾಗೂ ಆರೋಪಿಗಳು ಕಳ್ಳತನ ಮಾಡಿರುವ ಜಾಗಗಳನ್ನು ತೋರಿಸಿದಾಗ ಜರುಗಿಸಲಾಗಿದೆ ಎಂದು ಹೇಳುವ ನಿಪಿ-6 ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಸಹಿಯನ್ನು ತನ್ನದು ಎಂದು ಸಾಕ್ಷಿ ತಿಳಿಸಿದ್ದರಿಂದ ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 04-08-2000 ರಂದು ಹೊನ್ನಾವರದ ಬಂದರಿನ ಬಳಿ ಪೋಲಿಸರು ಕೇಳಿದ್ದರಿಂದ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಪೋಲಿಸರ ಜೊತೆ ಇಬ್ಬರು ವ್ಯಕ್ತಿಗಳು ಇದ್ದರು. ಸದರಿ ವ್ಯಕ್ತಿಗಳು ಬಂದರಿನ ಬಳಿ ಇದ್ದ ಒಂದು ಮನೆಯನ್ನು ತೋರಿಸಿರುತ್ತಾರೆ. ಪೋಲಿಸರು ನಮ್ಮನ್ನು ನಿಲ್ಲಿಸಿ ಛಾಯಾಚಿತ್ರ ತೆಗೆದಿರುತ್ತಾರೆ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 04-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಚಾಸಾ-20 ವಸಂತ ಆಚಾರರು ನಾನು ಮತ್ತು ಚಾಸಾ-4 ನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ. ನಾನು ಠಾಣೆಗೆ ಹೋದಾಗ ಅಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯಾದ ಸಜ್ಜಾದ್ ಅಹ್ಮದ್ ಗಣಿ ಮತ್ತು ಗೈರುಹಾಜರಿರುವ ಮುಬಾಸಿರ್ ಕುತುಬುದ್ದೀನ್ ಗಣಿ ಹಾಜರಿದ್ದರು ಎಂದರೆ ಸರಿ. ಆರೋಪಿಗಳು ಹೆಬ್ಬಾನಕೇರಿಯಲ್ಲಿ ತಾವು ಕಳ್ಳತನ ಮಾಡಿದ್ದು ಸದರಿ ಜಾಗವನ್ನು ತೋರಿಸುವುದಾಗಿ

ಹೇಳಿದರು ಎಂದರೆ ಸರಿ. ನಂತರ ಆರೋಪಿಗಳು ನಮ್ಮನ್ನು ಹೆಬ್ಬಾನಕೇರಿಯಲ್ಲಿ ಇರುವ ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿ ತಾವು ಯಾವ ರೀತಿ ಕಳ್ಳತನ ಮಾಡಿರುತ್ತೇವೆ ಎನ್ನುವುದನ್ನು ತೋರಿಸಿದರು ಎಂದರೆ ಸರಿ. ಆ ಸಂದರ್ಭದಲ್ಲಿ ಪೋಲಿಸರು ನಿಪಿ-6 ರ ಪ್ರಕಾರ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿ.

**ಪಾಟೀಸವಾಲುಃ- ಆರೋಪಿಗಳ ಪರವಾಗಿ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಪೋಲಿಸರು ನಮ್ಮ ಸಮಕ್ಷಮ ಆರೋಪಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ಪೋಲಿಸರ ಜೊತೆ ಇದ್ದರು ಎಂದು ಹೇಳಲಾದ ಇಬ್ಬರು ಆರೋಪಿಗಳು ಪೋಲಿಸರ ಮುಂದೆ ಯಾವುದೇ ಸ್ವ ಇಚ್ಛಾ ಹೇಳಿಕೆಗಳನ್ನು ನೀಡಿರುವುದಿಲ್ಲ. ಬಂದರಿಗೆ ಹೋಗುವ ಪೂರ್ವದಲ್ಲಿ 2-3 ಕಡೆ ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ. ಯಾರ ಮನೆಗಳ ಬಳಿ ಸಹಿ ಮಾಡಿದ್ದೇನೆ ಎನ್ನುವುದನ್ನು ಹೇಳಲಾಗುವುದಿಲ್ಲ. ನಿಪಿ-6 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-6 ನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ನಿಪಿ-6 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**